ಕರ್ನಾಟಕ ಸರ್ಕಾರ

# ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

ಆನಂದರಾವ್ ವೃತ್ತ, ಬೆಂಗಳೂರು-560 009

ಸಂಖ್ಯೆ: ಎಂಇ/ಎಸ್ಆರ್ಒ(1)/25/2018-19 ದಿನಾಂಕ: 05-07-2018

## ಅಧಿಸೂಚನೆ

**'ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ'** ಯಲ್ಲಿ ಖಾಲಿ ಇರುವ ನಿರ್ದೇಶಕರ ಹುದ್ದೆಯ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗಧಿತ ಕನಿಷ್ಠ ವಿದ್ಯಾರ್ಹತೆ ಮತ್ತು ಇತರೆ ವಿವರಗಳು ಎಂಸಿಐ ನಿಯಮಾವಳಿಗಳನ್ವಯ ಹಾಗೂ ಸದರಿ ಸಂಸ್ಥೆಯ ವೃಂದ ಮತ್ತು ನೇಮಕಾತಿ (Cadre & recruitment rules) ನಿಯಮಾವಳಿಗಳಂತೆ ಪರಿಗಣಿಸಲಾಗುವುದು.

**ವಿದ್ಯಾರ್ಹತೆ ವಿವರಗಳು ಕೆಳಕಂಡಂತಿರುತ್ತದೆ:-**

1. ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಎಂ.ಬಿ.ಬಿ.ಎಸ್ ವೈದ್ಯಕೀಯ ಪದವಿ ಹೊಂದಿರತಕ್ಕದ್ದು.
2. ಎಂ.ಸಿ.ಐ ಯಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಂದ ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಮತ್ತು ಶೈಕ್ಷಣಿಕ ವಿದ್ಯಾರ್ಹತೆಯೊಂದಿಗೆ ಕನಿಷ್ಠ 10 ವರ್ಷಗಳ ಬೋಧಕ ಅನುಭವವನ್ನು ಪ್ರಾಧ್ಯಾಪಕರು / ಸಹಪ್ರಾಧ್ಯಾಪಕರು / ರೀಡರ್ ಆಗಿ ವೈದ್ಯಕೀಯ ಕಾಲೇಜು / ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿರತಕ್ಕದ್ದು. ಈ ಪೈಕಿ ಯಾವುದೇ ವಿಭಾಗದಲ್ಲಿ ಕನಿಷ್ಠ 5 ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರಬೇಕು.
   ಈ ಹುದ್ದೆಯ ನೇಮಕಾತಿಗೆ ವಿಭಾಗದ ಮುಖ್ಯಸ್ಥರಿಗೆ ಆದ್ಯತೆ ನೀಡಲಾಗುವುದು.
3. **ವಯಸ್ಸು:-** ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಅರ್ಜಿದಾರರ ವಯಸ್ಸು 58 ವರ್ಷಗಳನ್ನು ಮೀರಿರಬಾರದು ಅಥವಾ ವಯೋನಿವೃತ್ತಿ ಹೊಂದಲು ಕನಿಷ್ಠ 2 ವರ್ಷಗಳ ಸೇವಾ ಅವಧಿ ಬಾಕಿ ಇರಬೇಕು.

**ಆಯ್ಕೆಯ ವಿಧಾನ:-** ಅರ್ಜಿದಾರರುಗಳ ಪೈಕಿ ಜೇಷ್ಠತೆಯುಳ್ಳ ಅರ್ಹ ಅಭ್ಯರ್ಥಿಗಳನ್ನು ಪಟ್ಟಿ ಮಾಡಲಾಗುವುದು ಹಾಗೂ ಸಂದರ್ಶಕ್ಕೆ ಕರೆಯಲಾಗುವುದು. ಸಂದರ್ಶನದ ದಿನಾಂಕ ಸಮಯ ಮತ್ತು ಸ್ಥಳದ ಮಾಹಿತಿಯನ್ನು ನಂತರ ತಿಳಿಸಲಾಗುವುದು.

**ವೇತನ ಶ್ರೇಣಿ:-** ರೂ. 37,400 – 67,000 + ಎ.ಜಿ.ಪಿ 10,000/- ಅನ್ವಯವಾಗುವ ಭತ್ಯೆಗಳು

**ಸೇವಾವಧಿ:-** ನೇಮಕಾತಿಯ ದಿನಾಂಕದಿಂದ 3 ವರ್ಷಗಳು ಅಥವಾ ಮುಂದಿನ ಸರ್ಕಾರದ ಆದೇಶದವರೆಗೆ (ಯಾವುದು ಮೊದಲೊ ಅಲ್ಲಿಯವರೆಗೆ)

ನಿಗಧಿತ ಅರ್ಜಿ ನಮೂನೆಗಳನ್ನು ವೆಬ್ ಸೈಟ್: www.karnataka.gov.in/dmekarnataka or www.kidwai.kar.nic.in ಇಲ್ಲಿಂದ ಡೌನ್‌ಲೋಡ್ ಮಾಡಿಕೊಂಡು, ಅರ್ಜಿಯೊಂದಿಗೆ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು ಇವರ ಹೆಸರಿನಲ್ಲಿ ಪಡೆದ ರೂ. 5000/- ಗಳ (ಹಿಂದಿರುಗಿಸಲಾಗುವುದಿಲ್ಲ) ಡಿಮ್ಯಾಂಡ್ ಡ್ರಾಫ್ಟ್ ಅನ್ನು ಹಾಗೂ ಭರ್ತಿ ಮಾಡಿದ ಅರ್ಜಿಯನ್ನು (ದಾಖಲೆಗಳೊಂದಿಗೆ) ರಿಜಿಸ್ಟರ್ ಪೋಸ್ಟ್‌ನಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು-560 009, ಇವರಿಗೆ ದಿನಾಂಕ: 12-07-2018 ರಂದು ಸಂಜೆ 04:00 ಗಂಟೆಯೊಳಗೆ ತಲುಪಿಸತಕ್ಕದ್ದು.

ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು